

# ಪ್ರತಿಭಾ ನಂದಕುಮಾರ್

ಹುಟ್ಟೂರು ಬೆಂಗಳೂರು. ಬಾಲ್ಯದ ಬಹುತೇಕ ದಿನಗಳನ್ನು ಬೆಂಗಳೂರು, ಮೈಸೂರಿನಲ್ಲಿ ಕಳೆದ ಪ್ರತಿಭಾ, ಮದ್ರಾಸ್ ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ಎಂ.ಫಿಲ್ ಪದವಿ ಪಡೆದಿದ್ದಾರೆ. ಎನ್.ಜಿ.ಎಫ್‌ನಲ್ಲಿ ಕೆಲ ಕಾಲ ಭಾಷಾಂತರಕಾರರಾಗಿ, ಬಳಿಕ 'ಡೆಕ್ಕನ್ ಹೆರಾಲ್ಡ್' ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಪತ್ರಕರ್ತೆಯಾಗಿದ್ದರು. ಪ್ರಸ್ತುತ ಸಹಾಯಕ ನಿರ್ದೇಶಕಿಯಾಗಿ ಸಿನಿಮಾ ರಂಗದಲ್ಲಿ ತೊಡಗಿಸಿಕೊಂಡಿದ್ದಾರೆ. ಬದುಕಿನಲ್ಲಿ ನಿರಂತರ ಸಾಹಸ ಮತ್ತು ಪ್ರಯೋಗಗಳನ್ನು ನಡೆಸುತ್ತ ಬಂದಿರುವ ಪ್ರತಿಭಾ ಅವರ ಬಾಳನೋಟಗಳನ್ನು ಅವರ ಬರಹಗಳಲ್ಲಿ ಕಾಣಬಹುದು.

80–90ರ ದಶಕದಲ್ಲಿ ಹೊಸ ಅಲೆ ಸೃಜಿಸಿದ ಕವಿತೆ 'ನಾವು ಹುಡುಗಿಯರೇ ಹೀಗೆ'. ಇದು ಅವರ ಮೊದಲ ಕವನ ಸಂಕಲನದ ಹೆಸರೂ ಆಯಿತು. ತಮಾಷೆ, ವಿಡಂಬನೆ, ಕನವರಿಕೆ, ಲೇವಡಿ... ಹೀಗೆ ಹಲವು ಭಾವಗಳನ್ನು ಹೊರಸೂಸುವ ಅವರ ಕವಿತೆಗಳದ್ದು ಯಾರೂ ಅನುಸರಿಸಲಾಗದ ವಿಶಿಷ್ಟ ಶೈಲಿ. 'ಈತನಕ', 'ರಸ್ತೆಯಂಚಿನ ಗಾಡಿ', 'ಕವಡೆಯಾಟ', 'ಆಹಾ ಪುರುಷಾಕಾರಂ', 'ಅವರು ಪುರಾವೆಗಳನ್ನು ಕೇಳುತ್ತಾರೆ', 'ಕಾಫಿ ಹೌಸ್', 'ಮುದುಕಿಯರಿಗಿದು ಕಾಲವಲ್ಲ' ಅವರ ಕವನಸಂಕಲನಗಳು. 'ಯಾನ' ಕಥಾಸಂಗ್ರಹವಾದರೆ, 'ಆಕ್ರಮಣ' ಅನುವಾದಿತ ಕತೆಗಳ ಸಂಗ್ರಹವಾಗಿದೆ. 'ಸೂರ್ಯಕಾಂತಿ' ಅವರ ಅನುವಾದಿತ ಡೋಗ್ರಿ ಕವನಗಳ ಸಂಗ್ರಹ. 'ಮಿರ್ಚಿ ಮಸಾಲ' ಲೇಖನ ಸಂಗ್ರಹ. 'ನಿಮ್ಮಿ ಕಾಲಂ' ಅಂಕಣ ಬರಹ. ಅವರ ಆತ್ಮಕಥನ, 'ಅನುದಿನದ ಅಂತರಗಂಗೆ'. ಇದು ಸಹ ಅವರ ಕವಿತೆಗಳಂತೆಯೇ ಕನ್ನಡ ವಾಚಕರಲ್ಲಿ ಸಂಚಲನ ಮೂಡಿಸಿದ ಬರವಣಿಗೆ.

ಸಂಪಾದಕರು ಕೆಲಸ ಕೊಟ್ಟಿದ್ದರು. ಪ್ರಾರಂಭದಲ್ಲಿ ನನ್ನ ಅನುಭವಗಳನ್ನು ದಿನಕರನೊಡನೆ ಹಂಚಿಕೊಳ್ಳಲು ಪ್ರಯತ್ನಿಸಿದೆ. ಸೂಕ್ತ ಪ್ರತಿಕ್ರಿಯೆ ಸಿಗದೆ ಕ್ರಮೇಣ ನನ್ನದೇ ವರ್ತುಲದೊಳಗೆ ನಿಂತು ಹೋದೆ. ಈಗ ನಮ್ಮದು ರೂಢಿಗತ ಹೊರತು ಇನ್ನೇನೂ ಅಲ್ಲ ಎನ್ನುವ ಸತ್ಯ ಅರಿವಾಗ ತೊಡಗಿತ್ತು. ದಿನಕರ ನನ್ನ ಬಗ್ಗೆ ತೋರಿಸುತ್ತಿದ್ದ ನಿರ್ಲಿಪ್ತತೆ ನನ್ನಲ್ಲಿ ಅತೃಪ್ತಿಯನ್ನು ಉಕ್ಕಿಸುತ್ತಿತ್ತು. ಆದರೆ ನಿಜವಾಗಿ ನನಗೆ ಬೊಟ್ಟು ಮಾಡಿ ತೋರಿಸುವಂತಹ ಕೊರತೆ ಯಾವುದೂ ಇರಲಿಲ್ಲ.

ಸಂದರ್ಶನ ಪ್ರಕಟವಾದಾಗ ಆ ಸಂಚಿಕೆಯನ್ನು ಕೊಡಲು ನಾನು ಹದಿನೈದು ರೂಪಾಯಿ ಖರ್ಚು ಮಾಡಿಕೊಂಡು ರಿಕ್ಷಾದಲ್ಲಿ ಅವನ ಮನೆಗೆ ಹೋಗುವ ಯಾವುದೇ ಅಗತ್ಯತೆ ಇರಲಿಲ್ಲ. ಆದರೂ ಹೋದೆ. ಎಲ್ಲಿಗೋ ಹೊರಟಿದ್ದ ಅವನು ಅದನ್ನು ರದ್ದು ಮಾಡಿ ಬಂದು ಕೂತ. ಮಾತು ಮಾತು ಮಾತು. ಎಲ್ಲಿದ್ದ ಇವನು ಇಷ್ಟು ದಿನ ಎಂದು ನಾನು ವಿಸ್ಮಯಪಡತೊಡಗಿದೆ. ಇಲ್ಲಿ ಯಾವುದೇ ಮಾತಿಗೆ ಕಟ್ಟು ಕಟ್ಟಳೆಯಿರಲಿಲ್ಲ. ಅಪಾರ್ಥದ ಭಯವಿರಲಿಲ್ಲ. ಏನನ್ನು ಬೇಕಾದರೂ ಮುಕ್ತವಾಗಿ ವ್ಯಕ್ತಪಡಿಸುವ ಸ್ವಚ್ಛಂದ ಅವಕಾಶವಿತ್ತು. ಅದಕ್ಕಿಂತ ಹೆಚ್ಚಿಗೆ ಮಾತಾಡಿದ್ದು ಅದರ ಸರಿಯಾದ ಅರ್ಥದಲ್ಲಿ ಸ್ವೀಕೃತವಾಗುವ ಅಪ್ಯಾಯಮಾನವಾದ ಭರವಸೆ ಇತ್ತು. ಇಲ್ಲಿ ಸುಳ್ಳು, ಕಪಟ, ಮೋಸಕ್ಕೆ ಸ್ಥಳವಿರಲಿಲ್ಲ. ಭಾವನೆಗಳಿಗೆ ಲೋಕಾರೂಢಿಯ ಮುಸುಕು ತೋರಿಸ ಬೇಕಾಗಿರಲಿಲ್ಲ.